(ಇಂದು ದಿಃ 04/8/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಮುಂದುವರೆದವಾಟೀ ಸವಾಲುಃ ವಾದಿ ಪರ ವಕೀಲರಿಂದಃ-**

14. ನಿಪಿ-12 ರಿಂದ 15 ದಾಖಲಾತಿಗಳ ಬಗ್ಗೆ ನನ್ನ ಸಾಕ್ಷ್ಯ ವಿಚಾರಣಾ ಆಗುವ ಪೂರ್ವದಲ್ಲಿಯೇ ಗೊತ್ತಿತ್ತು. ಲಿಖಿತ ತಕರಾರಿನಲ್ಲಿ ಅಸಲು ದಾವಾ ನಂಬರಃ474-2022ಈ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ಸುರೇಶ ಎಂಬುವರು ಸಲ್ಲಿಸಿರುತ್ತಾರೆ. 1ನೇ ಪ್ರತಿವಾದಿ ಸುರೇಶ ಹಾಗೂ 2ನೇ ಪ್ರತಿವಾದಿ ವಿರುದ್ಧ ದಾವೆ ಸಲ್ಲಿಸಿದ್ದರು ಅದು ವಜಾ ಆಗಿರುತ್ತದೆ. ಈ ದಾವೆ ಈಗಲೂ ಸಹ ತೀರ್ಮಾನಕ್ಕೆ ಬಾಕಿ ಇರುತ್ತದೆ ಎನ್ನುವುದು ಸರಿಯಲ್ಲ. ಸಾಕ್ಷಿಗೆ ನಿಡಿಃ12ನ್ನು ತೋರಿಸಿ ಮುಂದಿನ ದಿಃ12.08.2025 ಇರುತ್ತದೆ ಎಂದು ನೋಡಿ ಒಪ್ಪಿಕೊಂಡಿರುತ್ತಾರೆ. ಆ ದಾವೆಯನ್ನು ಏನು ಪರಿಹಾರ ಕೋರಿ ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಆ ದಾವೆಯನ್ನು ಈ ದಾವೆಯ 1ನೇ ಪ್ರತಿವಾದಿ ಶಾಶ್ವತ ನಿರ್ಬಂದಕ ಆದೇಶ ಕೋರಿ ಸುರೇಶ ಹಾಗೂ 2ನೇ ಪ್ರತಿವಾದಿಯ ಮೇಲೆ ಸಲ್ಲಿಸಿರುತ್ತಾರೆ, ಹಕ್ಕು ಘೋಷಣೆಯ ಬಗ್ಗೆ ಸಲ್ಲಿಸಿರುವುದಿಲ್ಲ , ಆ ದಾವೆಯಲ್ಲಿ ಇರುವ ಆಸ್ತಿ ಈ ದಾವೆಯಲ್ಲಿ ಇರುವುದಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಉದಾಹರಣೆಯ ಗೊಸ್ಕರ ದಾಖಲೆ ಹಾಜರುಪಡಿಸಿರುತ್ತೆನೆ ಎನ್ನುತ್ತಾರೆ.

15. ನಿಡಿಃ15 ಮಧ್ಯಕಾಲಿಕ ಅರ್ಜಿಯ ಮೇಲೆ ಮಾಡಿದ ಆದೇಶದ ಪ್ರತಿಯಾಗಿರುತ್ತದೆ ಎಂದರೆ ಸರಿಯಲ್ಲ. ಯಾವ ಗ್ರೌಂಡ್ಸನ ಆಧಾರದ ಮೇಲೆ ಸಲ್ಲಿಸಿರುತ್ತೆನೆ ಎನ್ನುವುದು ಗೊತ್ತಿರುವುದಿಲ್ಲ. ಈ ಆದೇಶದ ವಿರುದ್ಧ 1ನೇ ಪ್ರತಿವಾದಿ ಎಂ.ಎ ನಂಬರಃ15-2024ನ್ನು ಸಲ್ಲಿಸಿದ್ದು, ತೀರ್ಮಾನಕ್ಕೆ ಬಾಕಿ ಇರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎನ್ನುತ್ತಾರೆ. ಅಂತಿಮ ತೀರ್ಪು ಆಗದೇಇರುವುದರಿಂದ, ಅದರಲ್ಲಿರುವ ವಾಸ್ತು ಸ್ಥಿತಿ ಮತ್ತು ಇದರಲ್ಲಿರುವ ವಾಸ್ತು ಸ್ಥಿತಿ ಬೆರೆ ಬೆರೆ ಇದ್ದಾ, ಈ ದಾವೆಗೂ, ಆ ದಾವೆಗೂ ಹಾಗೂ ದಾಖಲೆಗೂ ಯವುದೇ ಸಂಬಂದ ಇರುವುದಿಲ್ಲ ಎಂಬುದು ಸರಿಯಲ್ಲ. ಕೇವಲ ದಾವೆಯನ್ನು ಮುಂದುಡುವ ಸಲುವಾಗಿ ಸಲ್ಲಿಸಿರುತ್ತೆನೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಈ ದಾವೆಯ ವಾದಿಯಾಗಲಿ, ನಾನಾಗಲಿ ಪಕ್ಷಗಾರನಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಸೊಸೈಟಿಯ ಆಸ್ತಿಯ ದಾಖಲೆಯಮೇಲೆ ಸಲ್ಲಿಸಿರುತ್ತೆನೆ ಎನ್ನುತ್ತಾರೆ. ಆ ದಾವೆಯಲ್ಲಿ 2ನೇ ಪ್ರತಿವಾದಿ ತಕರಾರು ಸಲ್ಲಿಸಿರುತ್ತಾರೋ ಇಲ್ಲವೊ ಗೊತ್ತಿರುವುದಿಲ್ಲ. 2ನೇ ಪ್ರತಿವಾದಿ ತಾನೂ ತಪ್ಪು ಮಾಡಿರುವ ಕಾರಣಕ್ಕಾಗಿ ಹಾಗೂ ತಮ್ಮದೇ ತಪ್ಪು ಇರುವ ಕಾರಣಕ್ಕಾಗಿ ಯಾವುದೇ ತಕರಾರು ಸಲ್ಲಿಸಿರುವುದಿಲ್ಲಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**04/8/2025**

**1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಲಬುರಗಿ.**